# 06-08-2026

# KAJANA INAUGURATION

ವಿದ್ಯಾವರ್ಧಕ ಸಂಘ (ರಿ), ಮೈಸೂರು

**ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು**

ಶೇಷಾದ್ರಿ ಅಯ್ಯರ್ ರಸ್ತೆ, ಮೈಸೂರು – 570 001

**೨೦೨೬–೨೭ನೇ ಸಾಲಿನ "ಕಜಾನಾ" ನಾಟಕ ತಂಡದ ಉದ್ಘಾಟನಾ ಕಾರ್ಯಕ್ರಮ**

**ಉದ್ಘಾಟಕರು**

ಶ್ರೀ. ದೀಪಕ್ ಮೈಸೂರು
ನಟ, ನಿರ್ದೇಶಕ, ಸಂಘಟಕ
ಹಾಗೂ ಅಧ್ಯಕ್ಷರು, ಸಂಚಲನ ಮೈಸೂರು.

**ಉಪಸ್ಥಿತಿ**

ಶ್ರೀ. ಶಶಿಧರ್ ಎನ್
ಅಧ್ಯಾಪಕ ಸಲಹೆಗಾರರು

**ಅಧ್ಯಕ್ಷತೆ**

ಡಾ. ಎನ್ ಮರೀಗೌಡ
ಪ್ರಾಂಶುಪಾಲರು
ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು
ಮೈಸೂರು.

**ಸಂಚಾಲಕರು**

ಶ್ರೀಮತಿ ಸೌಮ್ಯ ಎಂ
ಸಂಚಾಲಕರು, ಕಜಾನಾ ತಂಡ

ದಿನಾಂಕ : ೦೬.೦೮.೨೦೨೬ರ ಗುರುವಾರ | ಸಮಯ : ಬೆಳಗ್ಗೆ ೧೧.೦೦ ಗಂಟೆಗೆ
ಸ್ಥಳ : ಶ್ರೀ.ಪಿ.ಎಂ.ಚಿಕ್ಕಬೋರಯ್ಯ ಸಭಾಂಗಣ

## ಕಲೆ ಎಂಬುವುದು ಭಾವನೆಗಳ ಶೋಧನೆ, ಜೀವನದ ಪ್ರತಿಬಿಂಬ

**ದೀಪಕ್ ಮೈಸೂರು**

ಜ್ಞಾನಪೀಠ ಪ್ರಶಸ್ತಿ ಪಡೆದಂತಹ ಕಾವ್ಯ, ಕಾದಂಬರಿ, ನಾಟಕಗಳನ್ನು ಓದುವುದರಿಂದ ಮಕ್ಕಳ ಮನಸ್ಸಿನಲ್ಲಿ ಚಂಚಲತೆಯನ್ನು ಹೋಗಲಾಡಿಸಬಹುದು. ಪ್ರಾಂತೀಯ ಭಾಷೆಗಳನ್ನು, ಪ್ರಕೃತಿಯ ಸೌಂದರ್ಯ ಎಲ್ಲವನ್ನು ಗಮನಿಸುವುದು ಒಂದು ಕಲೆಯಾಗಿದೆ. ತಾಳ್ಮೆ, ಸಂಯಮ, ಶ್ರದ್ಧೆ ಇವುಗಳೆಲ್ಲವೂ ಇದ್ದರೆ ಮಾತ್ರ ಕಲೆ ಉಳಿಯಲು ಸಾಧ್ಯವಾಗುವುದು ಎಂದು ಸಂಚಲನ ರಂಗತಂಡದ ಸಂಸ್ಥಾಪಕ ಅಧ್ಯಕ್ಷ ದೀಪಕ್ ಮೈಸೂರು ಅಭಿಪ್ರಾಯಪಟ್ಟರು.

ನಗರದ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ ಏರ್ಪಡಿಸಿದ್ದ ಪ್ರಸಕ್ತ ಶೈಕ್ಷಣಿಕ ಸಾಲಿನ ಕಾಜಾಣ ನಾಟಕ ತಂಡದ ಕಾರ್ಯಚಟುವಟಿಕೆಗಳನ್ನು ನವರಸಗಳ ಬಣ್ಣದ ಬಾವುಟಗಳನ್ನು ನೆಡುವುದರ ಮೂಲಕ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು. ರಂಗಭೂಮಿ ಎಂಬುದು ಎಲ್ಲರ ಬದುಕನ್ನು ಬಣ್ಣದ ಲೋಕವಾಗಿ ಬದಲಾಯಿಸುವ ಒಂದು ವೇದಿಕೆಯಾಗಿದೆ ಹಾಗೂ ರಂಗಭೂಮಿ ಜೀವನ'ದಲ್ಲಿ ಗಟ್ಟಿತನ ಬೆಳೆಸುತ್ತದೆ. ವಿದ್ಯಾರ್ಥಿಗಳು ಪಠ್ಯಕ್ಕೆ ಸೀಮಿತವಾಗಿರದೆ ಬೇರೆ–ಬೇರೆ ವಿಚಾರಗಳ ಮೂಲಕ ರಂಗಭೂಮಿಯಲ್ಲಿ ತೊಡಗುವುದು ಅವಶ್ಯಕ. ವಿದ್ಯಾರ್ಥಿಗಳಲ್ಲಿ ಶಿಕ್ಷಣದ ಜೊತೆಗೆ ಸಾಹಿತ್ಯ, ಸಂಸ್ಕೃತಿ, ಕಲಾ ಹಾಗೂ ನಾಯಕತ್ವ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು. ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ, ಶಿಸ್ತು, ಸಹಕಾರ ಮತ್ತು ಜವಾಬ್ದಾರಿಯ ಮನೋಭಾವನೆಯನ್ನು ಕಲೆಯು ಬೆಳೆಸುತ್ತದೆ. ದಿನದ ೨೪ ತಾಸಲ್ಲಿ ಅರ್ಧಗಂಟೆ ಸಮಯವನ್ನು ರಂಗವೇದಿಕೆಗೆ ಮೀಸಲಿಡಲು ಸಲಹೆ ನೀಡಿದರು. ಮೊಬೈಲ್ ಬಳಕೆಯಿಂದ ನಶಿಸುತ್ತಿರುವ ಮಾನವ ಸಂಬಂಧಗಳನ್ನು ಗಟ್ಟಿಗೊಳಿಸುವ ನಿಟ್ಟಿನಲ್ಲಿ ರಂಗಭೂಮಿ ಕಾರ್ಯಪ್ರವೃತ್ತವಾಗಿದೆ ಎಂದು ತಿಳಿಸುತ್ತಾ ರಂಗಕರ್ಮಿಗಳಾದ ಅರುಂಧತಿನಾಗ್, ಮಂಡ್ಯ ರಮೇಶ್ ಅವರು ರಂಗಭೂಮಿಯ ಮೂಲಕ ಮಾಡುತ್ತಿರುವ ಸಮಾಜಮುಖಿ ಕಾರ್ಯಗಳನ್ನು ನೆನೆದರು. ಪ್ರಸ್ತುತ ಟಿವಿ ಮಾಧ್ಯಮದಲ್ಲಿ ಕಂಡುಬರುತ್ತಿರುವ ಹಾಸ್ಯ ಮತ್ತು ಸಂಗೀತಕ್ಕೆ ಸಂಬಂಧಿಸಿದ ಕಾರ್ಯಕ್ರಮ ಆಯೋಜಕರಿಗೆ ರಂಗಭೂಮಿಯ ಕಲಾವಿದರು ತರಬೇತಿ ನೀಡುತ್ತಿರುವುದು ಗಮನಾರ್ಹ ಅಂಶ ಎಂದು ವಿದ್ಯಾರ್ಥಿಗಳಿಗೆ ರಂಗಭೂಮಿಯ ಮಹತ್ವವನ್ನು ತಿಳಿಸಿದರು. ವಿದ್ಯಾರ್ಥಿಗಳಲ್ಲಿ ಸುಪ್ತವಾಗಿರುವ ಪ್ರತಿಭೆಯನ್ನು ಅನಾವರಣಗೊಳಿಸುವ ನಿಟ್ಟಿನಲ್ಲಿ ಕಾಲೇಜಿನ ಕಾಜಾಣ ತಂಡವು ಕಾರ್ಯಪ್ರವೃತ್ತವಾಗಲಿ, ಸಮಾಜಕ್ಕೆ ಆರೋಗ್ಯಕರ ಸಂದೇಶವನ್ನು ನೀಡಲಿ ಎಂದು ಆಶಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲ ಡಾ.ಎಸ್.ಮರೀಗೌಡ ತಮ್ಮ ಅಧ್ಯಕ್ಷೀಯ ನುಡಿಯಲ್ಲಿ ನಟರು, ನಿರ್ದೇಶಕರು, ಸಂಚಾಲಕರು, ತಂಡದ ನಾಯಕರು ಈ ಎಲ್ಲಾ ಹೆಸರಿಗೂ ಅವಕಾಶ ಕಲ್ಪಿಸುವ ವೇದಿಕೆಯೇ ರಂಗಭೂಮಿ. ಬಹಳ ವರ್ಷಗಳಿಂದ ನಡೆಸಿಕೊಂಡು ಬಂದಿರುವ ಕಾಜಾಣ ನಾಟಕ ತಂಡವು ಇಂದಿನ ವಿದ್ಯಾರ್ಥಿಗಳಿಗೂ ವೇದಿಕೆಯಾಗಬೇಕೆಂದು ಕಾರ್ಯಕ್ರಮಗಳ ಮೂಲಕ ಮಕ್ಕಳಲ್ಲಿ ಉತ್ಸಾಹ ಹೆಚ್ಚಿಸುವ ಜೊತೆಗೆ ಪ್ರೋತ್ಸಾಹವನ್ನು ನೀಡಿದರು. ಧ್ವನಿ ಮತ್ತು ಸ್ಪಂದನೆಯಿಂದ ವೇದಿಕೆಗಳನ್ನು ಉಪಯೋಗಿಸಿಕೊಳ್ಳುವುದು ಒಂದು ಕಲೆ ಎಂದು ವಿದಾರ್ಥಿಗಳಿಗೆ ತಿಳಿಸಿದರು. ಓದುವ ಹವ್ಯಾಸದ ಜೊತೆ ಬೇರೆ ಬೇರೆ ವೇದಿಕೆಯಲ್ಲಿ ತೊಡಗುವುದರಿಂದ ಬದುಕು ಸುಂದರಗೊಳ್ಳುತ್ತದೆ. ಕಾಜಾಣ ತಂಡದ ವತಿಯಿಂದ ಮಕ್ಕಳ ಬದುಕಿಗೆ ಮೌಲ್ಯಯುತ ವಿಚಾರಗಳನ್ನು ತಿಳಿಸುತ್ತಿದೆ ಮತ್ತು ರಂಗಭೂಮಿಯ ಜೊತೆ ನಮ್ಮ ಕಾಲೇಜಿನ ಒಡನಾಟ ಹೆಚ್ಚಾಗಿದ್ದು ವಿದ್ಯಾರ್ಥಿಗಳಿಗೆ ವೇದಿಕೆಯನ್ನು ಕಲ್ಪಿಸುತ್ತಿದೆ ಎಂದರು.

ಶ್ರೀಮತಿ ಪ್ರೀತಿ.ಪಿ ಹಾಗೂ ತಂಡದವರ ರಂಗಗೀತೆಯ ಮೂಲಕ ಪ್ರಾರಂಭವಾದ ಕಾರ್ಯಕ್ರಮದಲ್ಲಿ ಅಧ್ಯಾಪಕ ಸಲಹೆಗಾರ ಶ್ರೀ ಶಶಿಧರ್, ಕಾಜಾಣ ತಂಡದ ಸಂಚಾಲಕಿ ಶ್ರೀಮತಿ ಸೌಮ್ಯ.ಎಂ., ಅಧ್ಯಾಪಕರು, ಅಧ್ಯಾಪಕೇತರರು ಮತ್ತು ವಿದ್ಯಾರ್ಥಿಗಳುಹಾಜರಿದ್ದ ಕಾರ್ಯಕ್ರಮವನ್ನು ಶ್ರೀಮತಿ ಪ್ರೀತಿ.ಪಿ, ನಿರೂಪಿಸಿ, ಶ್ರೀ.ಚೆಲುವರಾಜು.ಎಂ.ಎಲ್ ವಂದಿಸಿದರು..











































